# ರೋಹಿಣಿ ನಕ್ಷತ್ರ



■ ಪ್ರವೀಣ ಕುಲಕರ್ಣಿ

ಭಾರತೀಯ ವಿಜ್ಞಾನ ಕ್ಷಿತಿಜದಲ್ಲಿ ಬೆಳಗಿದ ಮಹಿಳಾ ವಿಜ್ಞಾನಿಗಳ ಪ್ರಮಾಣ ಕಡಿಮೆ ಇದೆ ಎನ್ನುವ ಕೊರಗು ಲಾಗಾಯ್ತಿನಿಂದಲೂ ಕಾಡುತ್ತಿದೆ. ವಿಜ್ಞಾನದ ನೆಲೆಯಲ್ಲಿ ಮಹಿಳೆಯರ ಗಟ್ಟಿ ಹೆಜ್ಜೆ ಮೂಡಿಸುವ ಪ್ರಯತ್ನಗಳು ಸಹ ನಡೆಯುತ್ತಲೇ ಇವೆ. ಹಾಗೆ ವಿಜ್ಞಾನ ರಂಗದಲ್ಲೂ ಸ್ತ್ರೀ ಸಮಾನತೆಗಾಗಿ ಮಿಡಿದ ಜೀವ ಡಾ. ರೋಹಿಣಿ ಗೋಡಬೋಲೆ ಅವರದು. ಸುಮಾರು ನೂರು ಮಹಿಳಾ ವಿಜ್ಞಾನಿಗಳನ್ನು ಗುರುತಿಸಿ ಅವರ ಪುಟ್ಟ ಪುಟ್ಟ ಜೀವನಗಾಥೆಗಳ ಕೃತಿ ‘ಲೀಲಾವತೀಸ್ ಡಾಟರ್ಸ್’ ಅನ್ನು ಕೊಟ್ಟವರು ಅವರು. ಮೊನ್ನೆ, ಮೊನ್ನೆ ಅವರು ನಿಧನರಾದಾಗ ಭಾರತದ ವಿಜ್ಞಾನರಂಗವೇ ಅವರ ಅಗಲಿಕೆಗಾಗಿ ಮರುಗುವಷ್ಟು ಅವರು ಎತ್ತರಕ್ಕೆ ಬೆಳೆದು ನಿಂತಿದ್ದರು.

ಲೀಲಾವತಿಯು ಭಾರತದ ಖಗೋಳಶಾಸ್ತ್ರಜ್ಞದ ಪೂರ್ವಸೂರಿಗಳಲ್ಲಿ ಒಬ್ಬರೆನಿಸಿದ ಭಾಸ್ಕರ–2 ಅವರ ಪುತ್ರಿ. ಗಣಿತದ ಜಟಿಲ ಸೂತ್ರಗಳನ್ನು ಪುತ್ರಿಯನ್ನುದ್ದೇಶಿಸಿ ಸರಳ ರೂಪದಲ್ಲಿ ಕಟ್ಟಿಕೊಟ್ಟ ಕೃತಿ ‘ಲೀಲಾವತಿ’. ವಿಜ್ಞಾನದ ಪಾಠ ಕೇಳಿದ ಮೊದಲ ಮಹಿಳೆ ಎನ್ನುವ ಅರ್ಥದಲ್ಲಿ ಆಕೆಯ ಪುತ್ರಿಯರು ನಾವೆಲ್ಲ ಎಂದು ಹೆಮ್ಮೆಯಿಂದ ಹೇಳಿಕೊಂಡವರು ರೋಹಿಣಿ. ಸೈದ್ಧಾಂತಿಕ ಕಣ ಭೌತ ವಿಜ್ಞಾನಿಯಾದ ಅವರ ತವರೂರು ಮಹಾರಾಷ್ಟ್ರದ ಪುಣೆ. ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್‌ಸಿ) ಸುಮಾರು ಮೂರು ದಶಕ ಪ್ರಾಧ್ಯಾಪಕರಾಗಿ ಕೆಲಸ ಮಾಡಿದವರು. 2019ರಲ್ಲಿ ‘ಪದ್ಮಶ್ರೀ’ ಪ್ರಶಸ್ತಿಗೆ ಭಾಜನರಾದವರು.

ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕ ಹೊಸತರಲ್ಲಿ ಜನಿಸಿದವರು ರೋಹಿಣಿ. ‘ನನ್ನ ಪರಿಸರದಲ್ಲಿ ಮಹಿಳೆಯರು ಮನೆಯ ಕೆಲಸಗಳನ್ನು ಮಾಡುತ್ತಿದ್ದರು. ಓದಬೇಕೆನ್ನುವ ತಮ್ಮ ಕನಸು ನನಸಾಗಿಸಿಕೊಳ್ಳುವ ಅವಕಾಶವೂ ಅವರಿಗೆ ಸಿಗುತ್ತಿತ್ತು. ಅವರ ಓದಿನ ಉದ್ದೇಶ ಉದ್ಯೋಗವಾಗಿರಲಿಲ್ಲ. ಹಾಗೆ ನಾನೂ ಭೌತಶಾಸ್ತ್ರದಲ್ಲಿ ಅಧ್ಯಯನ ನಡೆಸಿದೆ. ಆ ಹಾದಿಯಲ್ಲಿ ನಡೆಯುತ್ತಲೇ ಇಲ್ಲಿಯವರೆಗೆ ಬಂದಿದ್ದೇನೆ’ ಎಂದು ಅವರೊಮ್ಮೆ ಹೇಳಿದ್ದರು. ಕಣಭೌತ ವಿಜ್ಞಾನದಲ್ಲಿ ಅವರು ನೀಡಿದ ಕೊಡುಗೆಯನ್ನು ಅಷ್ಟು ಸುಲಭವಾಗಿ ವಿವರಿಸಲು ಆಗದು. ‘ಡ್ರೀಸ್–ಗೋಡಬೋಲೆ ಎಫೆಕ್ಟ್’ ಎಂಬ ಹೆಸರಿನಿಂದ ಅವರ ಸಂಶೋಧನೆ ಫಲಶ್ರುತಿ ಹೆಸರಾಗಿದೆ. ಫ್ರಾನ್ಸ್ ಸರ್ಕಾರದ ಅತ್ಯುನ್ನತ ಪ್ರಶಸ್ತಿಯೂ ಅವರಿಗೆ ಸಂದಿದೆ.

ವಿಜ್ಞಾನ ಕ್ಷೇತ್ರದಲ್ಲಿ ಸಂಶೋಧನೆ ಮತ್ತು ಸಾಧನೆಯ ಮೂಲಕ ಸಿಗುವ ಫಲಿತಾಂಶ ಮರಳಿನ ಕಣದಷ್ಟಿರಬಹುದು. ಅದಕ್ಕೆ ತನ್ನದೇ ಆದ ಮಹತ್ವ ಇದ್ದೇ ಇದೆ. ಒಂದೊಂದೇ ಕಣವನ್ನು ಸೇರಿಸುತ್ತಾ ಹೋದರೆ ಹನಿ–ಹನಿಗೂಡಿದರೆ ಹಳ್ಳ ಎಂಬಂತೆ ಕ್ರಮೇಣ ಅದು ಸಾಗರವಾಗಬಲ್ಲದು. ಸಂಶೋಧನೆ ಅಷ್ಟು ಸುಲಭದ ಕೆಲಸವಲ್ಲ. ಸಣ್ಣ ಸಣ್ಣ ಸ್ಫೂರ್ತಿಯ ಎಳೆಗಳು ಹೊಸ ವಿಚಾರಗಳಿಗೆ ನಾಂದಿಯಾಗುತ್ತವೆ. ಜೇಮ್ಸ್ ಮ್ಯಾಕ್ಸ್‌ವೆಲ್‌ನ ವಿಚಾರವನ್ನೇ ತೆಗೆದುಕೊಳ್ಳಿ. ಆತ ಎಲೆಕ್ಟ್ರೋಮ್ಯಾಗ್ನೆಟಿಕ್ ರೇಡಿಯೇಷನ್ ಸಿದ್ಧಾಂತವನ್ನು ಮಂಡಿಸಿದಾಗ ಬ್ರಿಟನ್ ರಾಜಕಾರಣಿಗಳು ಇದರಿಂದ ಜನಸಾಮಾನ್ಯರಿಗೇನು ಉಪಯೋಗ ಎಂದು ಪ್ರಶ್ನಿಸಿದ್ದರು. ಅದಕ್ಕೆ ಆತ ಶಾಂತವಾಗಿ ಉತ್ತರಿಸಿದ್ದು, ‘ಮುಂದೊಂದು ದಿನ ಈ ಸಿದ್ಧಾಂತವನ್ನು ಆಧರಿಸಿದ ತಂತ್ರಜ್ಞಾನ ಬಂದಾಗ ತೆರಿಗೆ ಹಾಕಿ ಹಣ ವಸೂಲಿ ಮಾಡುತ್ತೀರಿ’ ಎಂದು. ವೈರ್‌ಲೆಸ್ ಸಂವಹನ ಇದೇ ಸಿದ್ಧಾಂತವನ್ನು ಆಧರಿಸಿದ್ದು. ಇದರರ್ಥ ಇಷ್ಟೆ: ಪ್ರಯೋಗಾಲಯದಲ್ಲಿ ಆಗಿದ್ದು, ತಕ್ಷಣಕ್ಕೆ ಅನ್ವಯಿಸಲು ಸಾಧ್ಯವಾಗದು. ಸಂಶೋಧನೆ ಮಾಡಬಯಸುವ ವಿದ್ಯಾರ್ಥಿಗಳು ಅತ್ಯಂತ ಜಾಗರೂಕತೆಯಿಂದ ಚಿಂತನೆ ನಡೆಸಬೇಕು. ಕೊನೆಯಲ್ಲಿ ಅದಕ್ಕೆ ಪ್ರತಿಫಲ ಸಿಕ್ಕೇ ಸಿಗುತ್ತದೆ ಎಂದು ಹೊಸ ಪೀಳಿಗೆಯನ್ನು ಹುರಿದುಂಬಿಸಿದವರು ರೋಹಿಣಿ.

ಭಾರತೀಯ ವಿಜ್ಞಾನರಂಗದಲ್ಲಿ ಲಿಂಗ ಸಮಾನತೆಗಾಗಿ ಆಂದೋಲನ ನಡೆಸಿದ ನಾಯಕಿಯೂ ಹೌದು ಈ ವಿಜ್ಞಾನಿ. ಈಗಿನ ದಿನಗಳ ಸಮಾವೇಶಗಳಲ್ಲಿ ಮಹಿಳಾ ಕಾಣ್ಕೆ ಕುರಿತು ಗೋಷ್ಠಿಗಳು ಇರುವುದು ಸಾಮಾನ್ಯವಾಗಿದೆ ಬಿಡಿ. ಇದಕ್ಕೆ ಶ್ರೀಕಾರ ಹಾಕಿದವರಲ್ಲಿ ರೋಹಿಣಿ ಪ್ರಮುಖರು. 2000ರ ದಶಕದಲ್ಲಿ ‘ಇಂಡಿಯನ್ ಅಕಾಡೆಮಿ ಆಫ್ ಸೈನ್ಸಸ್’ಗೆ ಲಿಂಗ ಸಮಾನತೆ ವಿಷಯವಾಗಿಯೂ ಗೋಷ್ಠಿ ನಡೆಸುವಂತೆ ದುಂಬಾಲು ಬಿದ್ದು, ಅದು ಕಾರ್ಯಗತವಾಗುವಂತೆ ನೋಡಿಕೊಂಡವರು ಅವರು. ಭಾರತೀಯ ಪ್ರಯೋಗಾಲಯಗಳಲ್ಲಿ, ವಿಜ್ಞಾನ ಸಂಸ್ಥೆಗಳಲ್ಲಿ ಲಿಂಗ ಸಮಾನತೆ ಎಷ್ಟಿದೆ ಎಂಬ ವಿಷಯವಾಗಿ ಅವರು ಸಮೀಕ್ಷೆಗಳನ್ನು ನಡೆಸಿದರು. ದೇಶದ ವಿಜ್ಞಾನ ಸಂಸ್ಥೆಗಳನ್ನು ಬಿಡದಂತೆ ಸುತ್ತಿ, ಅಲ್ಲಿನ ಕಿರಿಯ ಸಂಶೋಧಕಿಯರಲ್ಲಿ ಉತ್ಸಾಹ ತುಂಬಿ, ಸಂಶೋಧನಾ ಕ್ಷೇತ್ರದಲ್ಲಿ ದೊಡ್ಡದೊಂದು ಮಹಿಳಾ ಪಡೆ ಮುಂದುವರಿಯುವಂತೆ ಮಾಡಿದ ಶ್ರೇಯ ಕೂಡ ಅವರದು. ಪಿಎಚ್.ಡಿ.ಗಾಗಿ ಸಂಶೋಧನೆ ನಡೆಸಿದ 2000ಕ್ಕೂ ಅಧಿಕ ಮಹಿಳೆಯರನ್ನು ರೋಹಿಣಿ ಅವರ ತಂಡ ಸಮೀಕ್ಷೆಗೆ ಒಳಪಡಿಸಿತು. ವಿಜ್ಞಾನದಲ್ಲಿ ಮಹಿಳೆಯರು ತಮ್ಮ ಯಾನವನ್ನು ಅರ್ಧಕ್ಕೆ ಯಾಕೆ ನಿಲ್ಲಿಸುತ್ತಾರೆ ಎಂಬುದನ್ನು ಅರಿಯುವ ಯತ್ನ ಮಾಡಿತು. ಕೌಟುಂಬಿಕ ಹೊಣೆ ಮಾತ್ರವಲ್ಲದೆ, ಆಯ್ಕೆ ಪ್ರಕ್ರಿಯೆಯಲ್ಲಿ ಕಾಣದ ಪಾರದರ್ಶಕತೆ, ನೀತಿ ನಿರೂಪಣೆಯಲ್ಲಿನ ದೋಷ, ಸಮಿತಿಗಳಲ್ಲಿ ಸಿಗದ ಮಹಿಳಾ ಪ್ರಾತಿನಿಧ್ಯ ಮೊದಲಾದ ಕಾರಣಗಳೂ ವಿಜ್ಞಾನ ಕ್ಷೇತ್ರದಲ್ಲಿ ಮಹಿಳೆಯರ ಹಿಂದುಳಿಯುವಿಕೆ ಹಿಂದಿವೆ ಎನ್ನುವುದು ಗೊತ್ತಾಯಿತು. ಸರ್ಕಾರದ ಮಟ್ಟದಲ್ಲಿ ಹಲವು ಉತ್ತೇಜನಾ ಕ್ರಮಗಳನ್ನು ಕೈಗೊಳ್ಳಲು ಈ ಸಮೀಕ್ಷೆ ನೆರವಿಗೆ ಬಂತು.

ಮೂಲ ವಿಜ್ಞಾನ ವಿದ್ಯಾರ್ಥಿಗಳಿಗೆ ಅನುಕೂಲ ಆಗಲು ವಿಜ್ಞಾನಕ್ಕೆ ಸಂಬಂಧಿಸಿದ ದೊಡ್ಡ ದೊಡ್ಡ ಸಂಸ್ಥೆಗಳು ಕಾಲೇಜುಗಳ ಜತೆ ಸಂವಾದ ನಡೆಸುವುದು ಅಗತ್ಯ. ದೊಡ್ಡ ವಿಜ್ಞಾನ ಸಂಸ್ಥೆಗಳಲ್ಲಿರುವ ಎಲ್ಲ ಸೌಲಭ್ಯಗಳನ್ನು ಕಾಲೇಜುಗಳಲ್ಲಿ ಒದಗಿಸಲು ಆಗುವುದಿಲ್ಲ. ಸಂಸ್ಥೆಗಳೇ ಸಹಾಯಹಸ್ತ ಚಾಚಬೇಕು. ಅಲ್ಲದೆ, ಇಂತಹ ಕಾಲೇಜುಗಳ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳು ಬಂದು ಸೌಲಭ್ಯಗಳನ್ನು ಬಳಸಿಕೊಳ್ಳಲು ಅವಕಾಶ ನೀಡಬೇಕು. ವಿಜ್ಞಾನದ ಸಂಸ್ಥೆಗಳು ಮತ್ತು ಕಾಲೇಜುಗಳ ಮಧ್ಯೆ ಕೊಂಡಿ ಬೆಸೆಯುವ ಕೆಲಸ ಆಗಬೇಕು ಎನ್ನುವುದು ಅವರ ಆಶಯವಾಗಿತ್ತು.

ನಮ್ಮಲ್ಲಿ ಬೋಧನಾ ಕ್ರಮ ಕೂಡ ಸರಿಯಾಗಿಲ್ಲ. ಅದನ್ನು ಸರಿಪಡಿಸಿಕೊಂಡರೆ, ಮೂಲ ವಿಜ್ಞಾನದ ಶಿಕ್ಷಣಕ್ಕೆ ಭದ್ರ ಬುನಾದಿ ಹಾಕಬಹುದು. ಮುಖ್ಯವಾಗಿ ವಿದ್ಯಾರ್ಥಿಗಳು ಕುತೂಹಲ ಬೆಳೆಸಿಕೊಳ್ಳುವ, ಪ್ರಶ್ನೆ ಕೇಳುವ ಮತ್ತು ವಿಶ್ಲೇಷಣೆ ಸಾಮರ್ಥ್ಯವನ್ನು ರೂಢಿಸಿಕೊಳ್ಳಬೇಕು ಎಂದೆನ್ನುತ್ತಿದ್ದ ಈ ವಿಜ್ಞಾನಿ, ಈಗ ಭಾರತೀಯ ಮಹಿಳಾ ವಿಜ್ಞಾನದ ಕ್ಷಿತಿಜದಲ್ಲಿ ರೋಹಿಣಿ ನಕ್ಷತ್ರವಾಗಿ ಬೆಳಗುತ್ತಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65